ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE:

# ಸಭಾಪತಿಗೆ ತ್ರಿಮೂರ್ತಿಗಳ ಟವೆಲ್

- ನಮೋಶಿ, ಶಹಾಪುರ, ನಾರಾಯಣಸ್ವಾಮಿ ಹೆಸರು ಚಾಲ್ತಿ
- ಬಹುಮತ ಕಳೆದುಕೊಂಡ ಕಾಂಗ್ರೆಸ್‌ಗೆ ಸ್ಥಾನಭಂಗ
- ಬಿಜೆಪಿಗೆ ಜೆಡಿಎಸ್‌ನಿಂದ ಬೆಂಬಲ ನಿರೀಕ್ಷೆ

ಸಂ.ಕ.ಸಮಾಚಾರ ಬೆಂಗಳೂರು

ವಿಧಾನಸಭೆಯಲ್ಲಿ ಪಾರಮ್ಯ ಸಾಧಿಸಿದ್ದ ಬಿಜೆಪಿ, ಸರ್ಕಾರ ಸ್ಥಾಪನೆಯ ಒಂದೂವರೆ ವರ್ಷದ ಹೊಸ್ತಿಲಲ್ಲಿರುವಾಗ ವಿಧಾನ ಪರಿಷತ್‌ನಲ್ಲಿ ಸಂಖ್ಯಾಬಲದಲ್ಲಿ ತನ್ನ ಸಾಮರ್ಥ್ಯ ವಿಸ್ತರಿಸಿಕೊಂಡಿದೆ. ಹೀಗಾಗಿ ವಿಧಾನ ಪರಿಷತ್ ಸಭಾಪತಿ ಸ್ಥಾನವೂ ಬಿಜೆಪಿಗೆ ಒಲಿಯುವ ಸಮಯ ಎದುರಾಗಿದ್ದು, ಪಕ್ಷದ ಮೂವರು ಹಿರಿಯ ಶಾಸಕರು ಈಗ ಸ್ಪರ್ಧೆಯಲ್ಲಿದ್ದಾರೆ.

ಬಿಜೆಪಿ ಉನ್ನತ ಮೂಲಗಳ ಪ್ರಕಾರ, ನಾಲ್ಕು ಬಾರಿ ವಿಧಾನ ಪರಿಷತ್‌ಗೆ ಆಯ್ಕೆಯಾಗಿರುವ ಹಿರಿಯ ಶಾಸಕರಾದ ಶಶಿಲ್ ನಮೋಶಿ, ಮೂರು ಬಾರಿ ಆಯ್ಕೆಯಾಗಿರುವ ವೈ.ಎ.ನಾರಾಯಣಸ್ವಾಮಿ ಹಾಗೂ ಎರಡು ಬಾರಿ ಆಯ್ಕೆಯಾಗಿ ಕಳೆದ ಬಾರಿ ಪರಿಷತ್‌ನ ವಿರೋಧ ಪಕ್ಷದ ನಾಯಕ ಸ್ಥಾನದಿಂದ ಕೊನೆ ಗಳಿಗೆಯಲ್ಲಿ ವಂಚಿತರಾದ ಅರುಣ್ ಶಹಾಪುರ ಸ್ಪರ್ಧೆಯಲ್ಲಿದ್ದಾರೆ. ಅಂತಿಮವಾಗಿ ಬಿಜೆಪಿ ವರಿಷ್ಠರು ಹಾಗೂ ಜೆಡಿಎಸ್ ಒಪ್ಪುವ ಶಾಸಕರಿಗೆ ಈ ಹುದ್ದೆ ಒಲಿಯಲಿದೆ.

ಈಚೆಗೆ ನಡೆದ ಶಿಕ್ಷಕರ ಹಾಗೂ ಪದವೀಧರ ಮತಕ್ಷೇತ್ರಗಳ ವಿಧಾನ ಪರಿಷತ್ ಚುನಾವಣೆಯಲ್ಲಿ ನಾಲ್ಕೂ ಸ್ಥಾನಗಳನ್ನು ಬಾಚಿಕೊಳ್ಳುವ ಮೂಲಕ ಬಿಜೆಪಿ ಪರಿಷತ್‌ನಲ್ಲಿ 31 ಸ್ಥಾನಗಳೊಂದಿಗೆ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಈವರೆಗೆ ದೊಡ್ಡ ಪಕ್ಷವಾಗಿದ್ದ ಕಾಂಗ್ರೆಸ್‌ನ ಬಲ ಈಗ 28ಕ್ಕೆ ಕುಸಿದಿದೆ. ಹಾಲಿ ಸಭಾಪತಿ ಕೆ.ಪ್ರತಾಪ್‌ಚಂದ್ರ ಶೆಟ್ಟಿ ಸೇರಿದಂತೆ 29 ಸದಸ್ಯ ಬಲವನ್ನು ಹೊಂದಿದೆ.

ಹಾಲಿ ಸಭಾಪತಿ ಪ್ರತಾಪಚಂದ್ರ ಶೆಟ್ಟಿ ಅವರು ಕಳೆದ ವಿಧಾನಮಂಡಳ ಅಧಿವೇಶನ ಅವಧಿಯಲ್ಲಿ ಪರಿಷತ್‌ನಲ್ಲಿ ಎಪಿಎಂಸಿ ಹಾಗೂ ಭೂ ಸುಧಾರಣಾ ಮಸೂದೆಗಳ ಮಂಡನೆಗೆ ಸೂಕ್ತ ಸಹಕಾರ ನೀಡಲಿಲ್ಲ ಎಂಬ ವಿಚಾರದಲ್ಲಿ ಬಿಜೆಪಿ ತೀವ್ರ ಅಸಮಾಧಾನ ಹೊಂದಿದೆ.

ಹೀಗಾಗಿ ಪರಿಷತ್‌ನಲ್ಲಿ ಬಲಾಬಲ ಬದಲಾವಣೆ ಆಗುತ್ತಿದ್ದಂತೆಯೇ ಸಭಾಪತಿ ವಿರುದ್ಧ ಅವಿಶ್ವಾಸ ಮಂಡನೆಗೆ ಪರಿಷತ್ ಕಾರ್ಯದರ್ಶಿಗಳಿಗೆ ಈಗಾಗಲೇ ಮನವಿ ಸಲ್ಲಿಸಿದೆ.

ಮತ್ತೊಂದೆಡೆ ಕಾಂಗ್ರೆಸ್ ವಿರುದ್ಧ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಬಹಿರಂಗವಾಗಿ ವಾಗ್ದಾಳಿ ನಡೆಸುತ್ತಿದ್ದು, ಪರಿಷತ್‌ನಲ್ಲಿ ಬಿಜೆಪಿಗೆ ಜೆಡಿಎಸ್ ಬೆಂಬಲ ನೀಡುವುದು ಬಹುತೇಕ ಖಚಿತವಾಗಿದೆ.

ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಶೆಟ್ಟಿ ಅವರನ್ನು ಸಭಾಪತಿ ಮಾಡಲು ಜೆಡಿಎಸ್ ಬೆಂಬಲ ಸೂಚಿಸಿತ್ತು. ಆದರೆ ಎರಡೂ ಪಕ್ಷಗಳ ಮೈತ್ರಿ ವಿಧಾನಸಭೆಯಲ್ಲಿ ಮುರಿದು ಬಿದ್ದರೂ ಪರಿಷತ್‌ನಲ್ಲಿ ತಾತ್ಕಾಲಿಕವಾಗಿ ಮುಂದುವರಿದಿತ್ತು. ಇದೀಗ ಪರಿಷತ್‌ನಲ್ಲೂ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಮುರಿಯುವ ಸಮಯ ಬಂದಿದೆ.

31 ಸದಸ್ಯ ಬಲದ ಬಿಜೆಪಿಗೆ 14 ಸದಸ್ಯ ಬಲದ ಜೆಡಿಎಸ್ ಬೆಂಬಲ ನೀಡಿದರೆ ಅಲ್ಲಿಗೆ 45 ಸದಸ್ಯರ ಬೆಂಬಲದೊಂದಿಗೆ ಆಡಳಿತಾರೂಢ ಬಿಜೆಪಿಯ ಅಭ್ಯರ್ಥಿ ಸಭಾಪತಿ ಆಗಲಿದ್ದಾರೆ.

ಒಂದು ವೇಳೆ ಜೆಡಿಎಸ್ ಸಭಾಪತಿ ಚುನಾವಣೆಯಲ್ಲಿ ಬಿಜೆಪಿಗೆ ಬೆಂಬಲಿಸದೇ ಗೈರು ಹಾಜರಾದರೂ ಕೂಡ ಎರಡು ಮತಗಳಿಂದ ಬಿಜೆಪಿ ಅಭ್ಯರ್ಥಿ ಗೆಲ್ಲುವುದು ಖಚಿತ. ಸಭಾಪತಿ ಸ್ಥಾನ ಬಿಜೆಪಿಗೆ ಒಲಿಯುಯುವುದು ಬಹುತೇಕ ಆಗಿರುವುದರಿಂದ ಬಿಜೆಪಿಯಲ್ಲಿ ಸಭಾಪತಿ ಸ್ಥಾನದ ಆಯ್ಕೆಗೆ ಚರ್ಚೆ ನಡೆದಿದೆ.

ಆರಂಭದಲ್ಲಿ ಬೆಳಗಾವಿ ಜಿಲ್ಲೆಯ ಮಹಾಂತೇಶ ಕವಟಗಿಮಠ ಅವರ ಹೆಸರು ಕೇಳಿಬಂದರೂ ಬೆಳಗಾವಿ ಜಿಲ್ಲೆಗೆ ಸಾಕಷ್ಟು ಪ್ರಾತಿನಿಧ್ಯ ಇರುವುದರಿಂದ ಹಾಗೂ ಸ್ವತಃ ಕವಟಗಿಮಠ ಅವರಿಗೆ ಆಸಕ್ತಿ ಇಲ್ಲದಿರುವ ಕಾರಣದಿಂದ ಅವರ ಹೆಸರು ಕೈಬಿಡಲಾಗಿದೆ. ಇದೀಗ ನಮೋಶಿ ಹೆಸರು ಕೇಳಿಬರುತ್ತಿದ್ದು, ಅವರು ಸತತ 12 ವರ್ಷಗಳ ಕಾಲ ಸೋಲಿನಿಂದ ಪರಿಷತ್‌ನಿಂದ ಹೊರಗುಳಿದ ಕಾರಣ ವರಿಷ್ಠರು ಪರಿಗಣಿಸುವರೇ ಎಂಬುದನ್ನು ನೋಡಬೇಕು.

ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ವೇಳೆ ಪರಿಷತ್ ವಿಪಕ್ಷ ಸ್ಥಾನಕ್ಕೆ ಅರುಣ್ ಶಹಾಪುರ ಹೆಸರು ಚರ್ಚೆ ಆಗಿತ್ತು. ಆದರೆ ಕೋಟಾ ಶ್ರೀನಿವಾಸ ಪೂಜಾರಿ ಅವರಿಗೆ ಅದೃಷ್ಟ ಒಲಿದಿತ್ತು. ಹೀಗಾಗಿ ಮತ್ತೆ ಅರುಣ್ ಹೆಸರು ಚರ್ಚೆಯಲ್ಲಿದೆ. ಆದರೆ ಜೆಡಿಎಸ್ ಶಾಸಕರು ಬಿಜೆಪಿಯಿಂದ ವೈ.ಎ.ನಾರಾಯಣಸ್ವಾಮಿ ಆಯ್ಕೆ ಮಾಡಲು ಸಹಕಾರ ನೀಡುವ ಇಂಗಿತ ವ್ಯಕ್ತಪಡಿಸಿದ್ದಾರೆ ಎನ್ನಲಾಗುತ್ತಿದೆ.

ಹೀಗಾಗಿ ಬಿಜೆಪಿ ನಾರಾಯಣಸ್ವಾಮಿ ಅವರನ್ನು ಒಮ್ಮತದ ಅಭ್ಯರ್ಥಿಯಾಗಿಸಲು ಒಪ್ಪುತ್ತದೆಯೇ ಎಂಬುದನ್ನು ಕಾದು ನೋಡಬೇಕಿದೆ.